ತಾರೀಖು 28ನೇ ಫಿಬ್ರವರೀ 1884.

ಇದರಿಂದ ತಿಳಿಯಪಡಿಸುವದೇನಂದರೆ, ಈ ಕೆಳಗೆ ಬರುವ ಸಬ್ ರಿಜಿಸ್ಟ್ರಾರ್ ಆಫೀಸುಗಳಲ್ಲಿ ಬೇವಾರಸಾಗಿ ಇರತಕ್ಕ ಮುಂದೆ ವಿವರಿಸುವ ದಸ್ತಾವೇಜುಗಳನ್ನು ಹಾಜರ್ಮಾಡಿದವರೇ ಆಗಲಿ ಅಥವಾ ವಾಪಸ್ ಪಡಿಯುವದಕ್ಕೆ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರರೆ ಆಗಲಿ ಈ ನೋಟೀಸ್ ತಾರೀಖು ಲಾಗಾಯತು ವಂದು ತಿಂಗಳ ವಳಗಾಗಿ ಹಾಜರಾಗಿ ವಾಪಸ್ ತೆಗದುಕೊಳ್ಳದೆ ತಪ್ಪಿದರೆ ರಿಜಿಸ್ಟ್ರೇಷನ್ ನಿಬಂಧನೆ ಮೇರೆ ಅವು ನಾಶ ಪಡಿಸಲ್ಪಡುವವು.

ಸಬ್ ರಿಜಿಸ್ಟ್ರೇ ಆಫೀಸ್.	ದಸ್ತಾವೇಜು ನಂಬರ್.	ದಸ್ತಾವೇಜು ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರಿಸಿ ಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ರಿಜಿಸ್ಟ್ರಿ ಮಾಡಿದ ತಾರೀಖು.	ರಿಜಿಸ್ಟರಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
ಅತ್ತಿಕುಪ್ಪೆ.	1ನೇ ಬುಕ್ಕು 25 / 1878—79	ನೇರಲಕೆರೇ ಪಟೇಲ್ ಬೋರೇಗೌಡ	ನುಗ್ಗಿಹಳ್ಳೀಲಿರುವ ಸುಬೇದಾರ್ ಚನ್ನಪ್ಪಯ್ಯಂಗಾರ್ ಆಸ್ಥಾಯಗಜೆಕ್ಯೂಟರ್ ನು॥ ತಿರುವಾಲಾಚಾರ್	20—5—78	20—5—78	ಗಂಜೀಗೆರೆ ಗ್ರಾಮದಲ್ಲಿ ಯಿರುವ ನಂಬರ್ 101ನೇ ತೋಟ 6—19ನೇ ಹೊಲಗಳು ಸಹಾ 230 ರೂಪಾಯಿಗೆ ಆಧಾರ.
	139 / 1880—81	ಕೊರಟಿಗೆರೆ ಗೋವಿಂದರಾಯ	ಬಾರತೀಪುರದ ಶ್ರೀನಿವಾಸಗಿರಿ ಗೋಸಾಯಿ ಬಾವಾಜಿ	3—3—81	4—3—81	ಕೊರಟಿಗೆರೆ ಗ್ರಾಮದ ಕೆರೆ ಕೆಳಗೆ ನಂಬರ್ 34—330ನೇ ಗದ್ದೆ 220 ರೂಪಾಯಿಗೆ ಕ್ರಯ.
ಬಿಂಡಿಗ್ನವಿ.	2ನೇ ಬುಕ್ಕು 1 / 1878—79	ಹಿರೀಸಾವೆ ವೆಂಕಟನರಸಯ್ಯ 1, ಮನ್ನಾರಯ್ಯ 1,	ಹಿರೀಸಾವೆ ಅಗಸಾಲೆ ಬಸವಾಚಾರಿ 1 ಬುಕ್ಕಾ ಮೇಸ್ತ್ರಿ 1	24—2—79	25—10—78	ಹಿರೀಸಾವೆ ಕೆರೇಹಿಂದೆ ಸಬ್ಬನಹಳ್ಳಿ ಹಂತದಲ್ಲಿ 18 ರೂಪಾಯಿ ಕಂದಾಯವುಳ್ಳ ತೋಟವನ್ನು 150 ರೂಪಾಯಿಗೆ ಭೋಗ್ಯ ಮಾಡಿರುವದಾಗಿ.
	81 / 1881—82	ಹುಣಗನಹಳ್ಳಿ ದೊಡ್ಡೀಗೌಡ	ಬಟ್ಟಹಳ್ಳಿ ದಾಖಲೇ ಪುರದ ಕೊಪ್ಪಲ್ ಅಮ್ಮಿ ಜೆಂಗಿಗೌಡ	71—9—81	22—11—81	ಬಟ್ಟಹಳ್ಳೀ ಗ್ರಾಮದಲ್ಲಿ 1—3—11 ಕಂದಾಯವುಳ್ಳ 4 ತಾಕು ಜಮೀನುಗಳನ್ನು 8 ರೂಪಾಯಿಗೆ ಕ್ರಯಕ್ಕೆ ಕೊಟ್ಟಿರುವದಾಗಿ.

ವಿ. ಪಿ. ಮಾಧವರಾವ್,
ರಿಜಿಸ್ಟ್ರಾರ್.

ಹಾಸನ ಸಬ್ ಡಿವೀಜ್ಯನ್ ಆಫೀಸ್.

ತಾರೀಖು 29ನೇ ಫಿಬ್ರವರೀ 1884.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮೈಸೂರು ದೀವಾನ್ ಸಾಹೆಬರವರ ಹುಕ್ಕುಂ ಬವೋಜೇಬ್, ಹಾಸನ ಸಬ್ ಡಿವೀಜ್ಯನ್ ಪೈಕೀ ಮಂಜರಾಬಾದ್ ತಾಲ್ಲೂಕಿನಲ್ಲಿ ಯಿರುವ ಮಾರ್ನಹಳ್ಳಿ ಘಾಟೀಯಲ್ಲಿ ಟೋಲ್ ಗೇಟ್ ಯೆಂಬ ಸುಂಕದಕಟ್ಟೆ ವಳಗೆ ಸ್ರ 1884ನೇ ಇಸವಿ ಏಪ್ರೆಲ್ ಮಾಹೆ 1ನೇ ಮರ್ಕುಂ ಲಾಗಾಯತು, 1885ನೇ ಇಸವಿ ಮಾರ್ಚೀ 31ರ ವರಿಗೆ ಸುಂಕ ವಸೂಲ್ ಮಾಡುವೆ ಸ್ವತಂತ್ರವು, ಸ್ರ 1884ನೇ ಇಸವಿ ಮಾರ್ಚೀ ತಾರೀಖು 26ರಲ್ಲು ಕಸಬಾ ಸಕ್ಕೇಶಪುರದ ಮೊಕ್ಕಾಂ ತಾಲ್ಲೂಕು ಕಚೇರಿಯೊಳಗೆ ಬಹಿರಂಗವಾವ ಹರಾಜ್ ಮೂಲಕ ವಿಕ್ರಯಿಸಲ್ಪಡುತ್ತೆ.